ಅ) ಬಂದಿದೆ.

ಆ) ಹೌದು. 1995ರಿಂದ ವಿಚಾರಣೆ ನಡೆಯುತ್ತಿದೆ.

ಇ) ಇಲ್ಲ. ಒಬ್ಬ ಅಧಿಕಾರಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ಅಂತಿಮಗೊಳಿಸಿ ವೇತನ ಬಡ್ತಿಯನ್ನು ತಡೆಹಿಡಿಯುವ ದಂಡನೆಯನ್ನು ವಿಧಿಸಲಾಗಿದೆ. ಮತ್ತೊಬ್ಬ ಅಧಿಕಾರಿಯ ವಿರುದ್ಧ ವಿಚಾರಣೆ ಪ್ರಗತಿಯಲ್ಲಿದೆ.

ಈ) ಸದರಿ ನೌಕರರು ನಿವೃತ್ತಿ ಹೊಂದಿರುವುದರಿಂದ ವಿಚಾರಣೆ ವಿಳಂಬವಾಗುತ್ತಿದೆ.

ಸೂಳ್ಯ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆ.

1393 (1993)

ಶ್ರೀ ಎಸ್.ಅಂಗಾರ (ಸೂಳ್ಯ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೀರು ಸರಬರಾಜು ಯೋಜನೆಯಡಿಯಲ್ಲಿ ಕೊರೆಯಲಾದ ಕೊಳವೆಬಾವಿಗಳ ಒಟ್ಟು ಸಂಖ್ಯೆ ಎಷ್ಟು? ಕೈಪಂಪ್‌ಗಾಗಿ ಕೊರೆಯಲಾದ ಬಾವಿಗಳ ಒಟ್ಟು ಸಂಖ್ಯೆ ಎಷ್ಟು? (ಗ್ರಾಮವಾರು ವಿವರ ನೀಡುವುದು)

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಸೂಳ್ಯ ತಾಲ್ಲೂಕಿನಲ್ಲಿ 1998-99ನೇ ಸಾಲಿನಲ್ಲಿ ಗ್ರಾಮಾಣ ನೀರು ಸರಬರಾಜು ಕಾರ್ಯಕ್ರಮದಡಿ ಕೊರೆಯಲಾದ ಕೊಳವೆಬಾವಿಗಳ ಒಟ್ಟು ಸಂಖ್ಯೆ. 39. ಈ ಪೈಕಿ, ಕೈಪಂಪಿಗಾಗಿ ಕೊರೆಯಲಾದ ಕೊಳವೆಬಾವಿಗಳ ಸಂಖ್ಯೆ. 18. ಗ್ರಾಮವಾರು ವಿವರಗಳನ್ನು ಅನುಬಂಧ- 1ರಲ್ಲಿ ನೀಡಲಾಗಿದೆ.

ಅನುಬಂಧ- 1

ಶ್ರೀ ಎಸ್.ಅಂಗಾರ, ಕರ್ನಾಟಕ ವಿಧಾನಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 1993ರ ಉತ್ತರದ ಲಗತ್ತು.

1998-99ನೇ ಸಾಲಿನಲ್ಲಿ ಸೂಳ್ಯ ತಾಲ್ಲೂಕಿನಲ್ಲಿ ಕೊರೆಯಲಾದ ಕೊಳವೆಬಾವಿಗಳ ಗ್ರಾಮವಾರು ವಿವರಗಳು:

I. ಕೊಳವೆನೀರು ಸರಬರಾಜು: ಕಿರುನೀರು ಸರಬರಾಜು: ಪುನಃಶ್ಚೇತನ ಯೋಜನೆಗಳಿಗಾಗಿ ಕೊಳವೆಬಾವಿ ಕೊರೆದ ಗ್ರಾಮಗಳು:

1. ದೇವಚಳ್ಳ ಗ್ರಾಮದ ಕಂದ್ರಪ್ಪಾಡಿ ಎಂಬಲ್ಲಿ 2. ಕೊಲ್ಲಮೊಗ್ರು ಗ್ರಾಮದ ಕಟ್ಟಗೋವಿಂದನಗರ 3. ಸುಬ್ರಹ್ಮಣ್ಯ 4. ಬಳ್ಪ ಬೀದಿಗುಡ್ಡ 5. ಪರುವಾಜೆ ಮುರ್ಕತ್ತಿ 6. ಅಲೆಟ್ಟಿ ಅರಂಬರು 7. ಕಲ್ಲಡ್ಕ 8. ಐವರ್ನಾಡು 9. ದೇವಚಳ್ಳ ಮಾವಿನಕಟ್ಟೆ 10. ಬಾಳಿಲ ಗ್ರಾಮದ ಕೊಡಂಕೇರಿ 11. ಸಂಪಾಜೆ ಗ್ರಾಮದ ಕಡೆಪಾಲ 12. ಬೆಳ್ಳಾರೆ ಸೆಟ್ಟಾರು 13. ದೇವಚಳ್ಳ ಗ್ರಾಮದ ಎಲಿಮಲೆ 14. ಕಳಂಜ ಗ್ರಾಮದ ಕೋಚಿ 15. ಉಬರಡ್ಕ ಮಿತ್ತೂರು ಗ್ರಾಮ ಅಮ್ಮೆ 16. ಅರಂತೋಡು ಬೆಳಿಯೂರು 17. ತೋಡಿಕಾನ ದೊಡ್ಡ ಕುಮೇರಿ 18. ಗುತ್ತಿಗಾರು ಗ್ರಾಮದ ಗುಂಡಡ್ಕ 19. ಬಾಳಿಲ ಗ್ರಾಮದ ಪ.ಜಾತಿ ಆಶ್ರಮ ಶಾಲೆ 20. ಅರಟ್ಟಿ ಗ್ರಾಮದ ಪ.ಜಾತಿ ಆಶ್ರಮ ಶಾಲೆ 21. ಬಳ್ಪ ಗ್ರಾಮದ ನೀರಜರಿ (ಒಟ್ಟು 21 ಕೊಳವೆಬಾವಿಗಳು)

II. ಕೈಪಂಪಿಗಾಗಿ ಕೊಳವೆಬಾವಿ ಕೊರೆದ ಗ್ರಾಮಗಳು:

1. ಸುಳ್ಯದ ಕೋರ್ಟು ಬಳಿ 2. ಆರೆಟ್ಟಿ ಅರಂಬೂರು ಪರಿವಾಕಾನ್ ಸರ್ವೀಸ್ ಸ್ಟೇಷನ್ ಹತ್ತಿರ 3. ಮಂಡೇಕೋಲು ಗ್ರಾಮಪಂಚಾಯತ್ ಕಛೇರಿ ಬಳಿ 4. ಎಣ್ಮೂರು ಗ್ರಾಮದ ತಡ್ಡಡ್ಕ ಹರಿಜನ ಕಾಲೋನಿ 5. ಎಣ್ಮೂರು ಗ್ರಾಮದ ಕಲ್ಲೇರಿ 6. ಬೆಳ್ಳಾರೆ ಗ್ರಾಮ ಸೆಟ್ಟಾರು ಕಜೆ 7. ಅಮರಮುಡ್ನೂರು ಗ್ರಾಮದ ಕುಕ್ಕು ಜಡ್ಕ 8. ಅರಂತೋಡು ಗ್ರಾಮದ ದೇರಾಜೆ 9. ಅರಂತೋಡು ಗ್ರಾಮದ ಹರಿಹರ ಪಲ್ಲತಡ್ಕ 10. ಜಾಲ್ಸೂರು ಗ್ರಾಮದ ಕಟ್ಟಿಕಡ್ಕ 11. ದೇವಚಹಳ್ಳ ಗ್ರಾಮದ ಸೇವಾಜಿ 12. ಐವರ್ನಾಡು ಗ್ರಾಮದ ಅಕ್ಕೋಜಿಪಾಲ 13. ಎಡಮಂಗಲ ಗ್ರಾಮದ ಮರ್ದೂರಡ್ಕ 14. ಬೆಳ್ಳಾರೆ ಗೌರಿ ಹೊಳೆ 15. ದರ್ಬಾಸ್ತು ಜೀಮೂಲೆ 16. ಐವರ್ನಾಡು ಗ್ರಾಮದ ಲಾವಂತಡ್ಕ 17. ಪಂಜ ಐವತ್ತೊಕ್ಕು 18. ಕಲ್ಮಡ್ಕ ಉದನೋರಿ. (ಒಟ್ಟು 18 ಕೊಳವೆಬಾವಿಗಳು)